GULBARGA UNIVERSITY
Jnana Ganga, Kalaburagi- 585 106, Karnataka, India.
☎ 08472-263202
Fax 08472-263206
E-Mail: registrargug@rediffmail.com

ಸಂ. ಗುವಿಕ:ವಿಮವಿ:ಪಿಎಚ್.ಡಿ:2017-18: 358 ದಿನಾಂಕ: 09.06.2017

ಗೆ,
ಪ್ರಾಂಶುಪಾಲರು,
ಪಟ್ಟಿಯಲ್ಲಿ ನಮೂದಿಸಿರುವ
ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ.

ಮಾನ್ಯರೆ,

ವಿಷಯ: ಸಂಶೋಧನಾ ಮಾರ್ಗದರ್ಶಕರನ್ನು ಹೊಂದಿರುವ ಸ್ನಾತಕ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಹೊಸದಾಗಿ ಸಂಲಗ್ನತೆ ಪಡೆಯುವ ಪ್ರಕ್ರಿಯೆ ಬಗ್ಗೆ.

ಉಲ್ಲೇಖ: ಸಿಂಡಿಕೇಟ ಸಭೆಯ ನಿರ್ಣಯ 1, ದಿನಾಂಕ 09.06.2017.

--

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಭಾಗದ ಹಿಂದುಳಿದ ಪ್ರದೇಶವಾಗಿದ್ದು, ಈ ಭಾಗದಲ್ಲಿ ಸರ್ಕಾರದ ನಿರ್ದೇಶನದಂತೆ ಉನ್ನತ ಶಿಕ್ಷಣದ ಒಟ್ಟು ನೋಂದಣಿ ಪ್ರಮಾಣ (Gross Enrollment Ratio-GER) ಹೆಚ್ಚಿಸುವ ಹಾಗೂ ಈ ಭಾಗದ ಮಹಾವಿದ್ಯಾಲಯಗಳು ನ್ಯಾಕ್ (NAAC) ಮಾನ್ಯತೆಗಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದುವ ಅನಿವಾರ್ಯತೆಯಿಂದ ದಿನಾಂಕ 09.06.2017 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದಂತೆ, ಈ ಭಾಗದ ವಿದ್ಯಾರ್ಥಿಗಳ ಸಂಶೋಧನೆಗೆ ಪ್ರೋತ್ಸಾಹಿಸಲು, ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸಂಶೋಧನಾ ಮಾರ್ಗದರ್ಶಕರನ್ನು ಹೊಂದಿರುವ ಸ್ನಾತಕ ಮಹಾವಿದ್ಯಾಲಯಗಳಲ್ಲಿ, 2017-18ನೇ ಸಾಲಿಗೆ ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಲು, ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಅವಕಾಶ ನೀಡಲು ನಿರ್ಣಯಿಸಲಾಗಿದೆ.

ಸಂಶೋಧನಾ ಮಾರ್ಗದರ್ಶಕರನ್ನು ಹೊಂದಿರುವ ಆದರೆ, ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರದ ಮಹಾವಿದ್ಯಾಲಯಗಳಲ್ಲಿ, ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸದಿದ್ದಲ್ಲಿ, ಯು.ಜಿ.ಸಿ. ಮಾರ್ಗದರ್ಶಿ ನಿಯಮಗಳನ್ವಯ ಆಯಾ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರತ ಸಂಶೋಧನಾ ಮಾರ್ಗದರ್ಶಕರ ಮಾನ್ಯತೆಯನ್ನು ಅಮಾನತುಗೊಳಿಸಬೇಕಾದ ಅನಿವಾರ್ಯತೆ ಉಂಟಾಗಿದೆ.

ಆದ್ದರಿಂದ, ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಲಗ್ನಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರು ತಮ್ಮ ಸಂಸ್ಥೆಯ ಆಡಳಿತ ಮಂಡಳಿಯ ಜೊತೆ ಈ ವಿಷಯದ ಕುರಿತು ಚರ್ಚಿಸಿ, ಸಂಬಂಧಿತ ವಿಷಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಹೊಸ ಸಂಲಗ್ನತೆ ಪಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಮುಂದುವರೆದು, ಈ ವಿಷಯವನ್ನು ತುಂಬಾ ಗಂಭೀರವಾಗಿ ಪರಿಗಣಿಸಿ, ಈ ಸಂಬಂಧ ಚರ್ಚಿಸಲು ಸಂಬಂಧಪಟ್ಟ ಪ್ರಾಂಶುಪಾಲರ ಸಭೆಯನ್ನು, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 13.06.2017 ರಂದು ಅಪರಾಹ್ನ 12.00 ಗಂಟೆಗೆ ಕಾರ್ಯಸೌಧದ "ರಾಧಾಕೃಷ್ಣ ಸಭಾಂಗಣ"ದಲ್ಲಿ ಕರೆಯಲಾಗಿದೆ.

ಆದ್ದರಿಂದ, ತಾವು ಈ ಸಭೆಗೆ ತಪ್ಪದೇ ಹಾಜರಿರಲು ಹಾಗೂ ಸ್ನಾತಕೋತ್ತರ ಕೋರ್ಸು ಪ್ರಾರಂಭಿಸುವ ಬಗ್ಗೆ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ, ವಿವರವಾದ ಮಾಹಿತಿಯೊಂದಿಗೆ ಈ ಸಭೆಗೆ ಆಗಮಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

9/6/17

ಕುಲಸಚಿವರು,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ದಿನಾಂಕ 13.06.2017 ರಂದು ಜರುಗಲಿರುವ ಸಭೆಗೆ ಹಾಜರಾಗಬೇಕಾದ ಪ್ರಾಂಶುಪಾಲರ ಪಟ್ಟಿ.

| | |
|---|---|
| 1. | ಪ್ರಾಂಶುಪಾಲರು,<br>ಸರಕಾರಿ ಪದವಿ ಮಹಾವಿದ್ಯಾಲಯ,<br>ಕಲಬುರಗಿ. |
| 2. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು,<br>ಆಳಂದ |
| 3. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು,<br>ಚಿತ್ತಾಪೂರ |
| 4. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಮಹಾಗಾಂವ ಕ್ರಾಸ್ |
| 5. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಬೀದರ |
| 6. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಅಫಜಲಪೂರ |
| 7. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಯಾದಗೀರ |
| 8. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಗುರುಮಿಟಕಲ್ |
| 9. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಬಸವಕಲ್ಯಾಣ |
| 10. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಹುಮನಾಬಾದ |
| 11. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ<br>ಸುರಪುರ |
| 12. | ಪ್ರಾಂಶುಪಾಲರು,<br>ಸರಕಾರಿ ಪ್ರಥಮ ದರ್ಜೆ ಕಾಲೇಜು<br>ಜೇವರ್ಗಿ |

9/6/17

| | |
|---|---|
| 13. | ಪ್ರಾಂಶುಪಾಲರು,<br>ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯ<br>ಕಲಬುರಗಿ. |
| 14. | ಪ್ರಾಂಶುಪಾಲರು,<br>ಡಾ. ಬಿ.ಆರ್. ಅಂಬೇಡ್ಕರ್ ಪದವಿ ಮಹಾವಿದ್ಯಾಲಯ,<br>ಎಸ್.ಟಿ.ಬಿ.ಟಿ. ಕ್ರಾಸ್, ಕಲಬುರಗಿ |
| 15. | ಪ್ರಾಂಶುಪಾಲರು,<br>ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ<br>ಶರಣ ನಗರ, ಕಲಬುರಗಿ |
| 16. | ಪ್ರಾಂಶುಪಾಲರು,<br>ನೃಪತುಂಗ ಪದವಿ ಮಹಾವಿದ್ಯಾಲಯ,<br>ಸೇಡಂ |
| 17. | ಪ್ರಾಂಶುಪಾಲರು,<br>ಡಾ. ಬಿ.ಆರ್. ಅಂಬೇಡ್ಕರ್ ಪದವಿ ಕಾಲೇಜು,<br>ಹಳ್ಳಿಖೇಡ (ಬಿ) |
| 18. | ಪ್ರಾಂಶುಪಾಲರು,<br>ಎಂ.ಎಸ್.ಐ. ಪದವಿ ಕಾಲೇಜು<br>ಕಲಬುರಗಿ |
| 19. | ಪ್ರಾಂಶುಪಾಲರು,<br>ಹಮೀದ ಪಿಯಾರೆ ಶಿಕ್ಷಣ ಮಹಾವಿದ್ಯಾಲಯ,<br>ಕಲಬುರಗಿ |
| 20. | ಪ್ರಾಂಶುಪಾಲರು,<br>ಎಸ್.ಎಸ್. ಮರಗೋಳ ಕಾಲೇಜು,<br>ಶಹಾಬಾದ |
| 21. | ಪ್ರಾಂಶುಪಾಲರು,<br>ಎಲ್.ವಿ.ಡಿ. ಕಾಲೇಜು,<br>ರಾಯಚೂರು |
| 22. | ಪ್ರಾಂಶುಪಾಲರು,<br>ಎಸ್.ಎಸ್.ಕೆ. ಬಸವೇಶ್ವರ ಕಾಲೇಜು<br>ಬಸವಕಲ್ಯಾಣ |
| 23. | ಪ್ರಾಂಶುಪಾಲರು,<br>ಕರ್ನಾಟಕ ಕಾಲೇಜು,<br>ಬೀದರ |
| 24. | ಪ್ರಾಂಶುಪಾಲರು,<br>ಶ್ರೀ ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ<br>ಶರಣ ನಗರ, ಕಲಬುರಗಿ |
| 25. | ಪ್ರಾಂಶುಪಾಲರು,<br>ವಿಶ್ವೇಶ್ವರಯ್ಯ ಪದವಿ ಮಹಾವಿದ್ಯಾಲಯ,<br>ಕಲಬುರಗಿ. |